# ಕಂದಮ್ಮಗಳ ಬಲಿ ನಿಲ್ಲಲಿ

**ಗರ್ಭಿಣಿ ಮಹಿಳೆಯರ ಆರೋಗ್ಯದ ಕಾಳಜಿ ಹಾಗೂ ಹೆರಿಗೆಯ ಸಂದರ್ಭದಲ್ಲಿ ಪಂಚಸೂತ್ರಗಳ ಪಾಲನೆ ಮಾಡಿದಲ್ಲಿ ಶಿಶುಮರಣವನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಬಹುದು.**

ಭಾರತದಲ್ಲಿ ಜನಿಸುವ ಪ್ರತಿ ಮೂರು ಮಕ್ಕಳಲ್ಲಿ ಒಂದು ಮಗು ಹುಟ್ಟಿದ ದಿನವೇ ಸತ್ತು ಹೋಗುತ್ತದೆ! 'ಮಕ್ಕಳನ್ನು ಉಳಿಸಿ' (ಸೇವ್ ದಿ ಚಿಲ್ಡ್ರನ್) ಸ್ವಯಂ ಸೇವಾ ಸಂಸ್ಥೆ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ ಈ ಆಘಾತಕಾರಿ ಸಂಗತಿ ಬೆಳಕಿಗೆ ಬಂದಿದೆ. ಶಿಶುಮರಣ ಅತ್ಯಧಿಕವಾಗಿರುವ ವಿಶ್ವದ ಹತ್ತು ರಾಷ್ಟ್ರಗಳ ಪೈಕಿ ಭಾರತವೇ ಮೊದಲ ಸ್ಥಾನದಲ್ಲಿದೆ. ಭಾರತದಲ್ಲಿ ಶೇ. 29 ಮಕ್ಕಳು ಹುಟ್ಟಿದ ದಿನವೇ ನಿಧನರಾದರೆ, ಇತರ ಒಂಬತ್ತು ರಾಷ್ಟ್ರಗಳಲ್ಲಿ ಈ ಪ್ರಮಾಣ ಕಡಿಮೆ ಇದೆ. ನೈಜೀರಿಯಾದಲ್ಲಿ ಶೇ.9ರಷ್ಟು ಮಕ್ಕಳು ಹುಟ್ಟಿದ ದಿನವೇ ಸತ್ತರೆ, ಭಾರತಕ್ಕಿಂತ ಹಿಂದುಳಿದ ರಾಷ್ಟ್ರಗಳಾದ ಪಾಕಿಸ್ತಾನ, ಇಥಿಯೋಪಿಯಾ, ಬಾಂಗ್ಲಾ, ತಾಂಜಾನಿಯಾಗಳಲ್ಲಿ ಶಿಶುಮರಣ ಪ್ರಮಾಣ ಕ್ರಮವಾಗಿ ಶೇ.6, ಶೇ.3 ಮತ್ತು ಶೇ.2 ಇದೆ. ಹುಟ್ಟಿದ ದಿನವೇ ಸಾಯುವ ಮಕ್ಕಳ ಸಂಖ್ಯೆ ಭಾರತದಲ್ಲಿ 3ಲಕ್ಷ 9ಸಾವಿರ. ಮಗುವಿಗೆ ಜನ್ಮ ನೀಡುವ ಹೊತ್ತಿನಲ್ಲೇ ತಾಯಿ ಮರಣ ಹೊಂದುವ ಪ್ರಮಾಣದಲ್ಲೂ ಭಾರತದ್ದು ವಿಶ್ವದಾಖಲೆ. ಪ್ರತಿವರ್ಷ 56 ಸಾವಿರ ತಾಯಂದಿರು ಹೆರಿಗೆ ಸಂದರ್ಭದಲ್ಲಿ ಅಸುನೀಗುತ್ತಾರೆ.

ಗರ್ಭಿಣಿಯರ ಆರೋಗ್ಯದ ಕುರಿತು ತಾತ್ಸಾರ ಹೊಂದಿರುವ ಸಮಾಜದಲ್ಲಿ ಮಹಿಳೆ ಸಾಮಾನ್ಯವಾಗಿ ರಕ್ತಹೀನತೆಯಿಂದ ಬಳಲುತ್ತಾಳೆ, ಹೆರಿಗೆಯ ಸಂದರ್ಭದಲ್ಲಿ ಸತ್ತೇ ಹೋಗುತ್ತಾಳೆ. ಭಾರತ ಮತ್ತು ನೇಪಾಳದಲ್ಲಿ ಶೇ.12ರಿಂದ 13 ಮಂದಿ ಮಹಿಳೆಯರು ತೀವ್ರ ಕೃಶಕಾಯರಾಗಿರುವುದು ಹೆಚ್ಚಿನ ಸಾವಿಗೆ ಕಾರಣವಾಗಿದೆ. ಹೆರಿಗೆ ಸಂದರ್ಭದಲ್ಲಿ ಸುರಕ್ಷತಾ ಕ್ರಮಗಳನ್ನು ಸರಿಯಾಗಿ ಪಾಲಿಸದೆ ಇರುವ ಕಾರಣಕ್ಕೆ ಹೆಚ್ಚಿನ ಸಂಖ್ಯೆಯ ಮಕ್ಕಳು ಹುಟ್ಟಿದ ಒಂದು ವಾರದೊಳಗೆ ಸಾಯುತ್ತವೆ. ಹೆರಿಗೆಗೆ ಬಳಸುವ ಉಪಕರಣಗಳಾದ ಕತ್ತರಿ, ದಾರ, ಕೈಗವಸು, ಹೆರಿಗೆ ಸ್ಥಳ, ಕೈಗಳು ಸ್ವಚ್ಛವಾಗಿರಬೇಕು. ವೈದ್ಯಕೀಯ ಪರಿಭಾಷೆಯಲ್ಲಿ ಇವನ್ನು 'ಶುಚಿತ್ವಕ್ಕೆ ಪಂಚಸೂತ್ರ' ಎಂದು ಕರೆಯಲಾಗುತ್ತದೆ. ಸರ್ಕಾರಿ ಹೆರಿಗೆ ಆಸ್ಪತ್ರೆಗಳಲ್ಲಿ ಪಂಚಸೂತ್ರದ ಪಾಲನೆ ಸರಿಯಾಗಿ ಆಗುತ್ತಿಲ್ಲ ಎಂದು ಸ್ವತಃ ವೈದ್ಯರೇ ಒಪ್ಪಿಕೊಳ್ಳುತ್ತಾರೆ. ಹೊಕ್ಕಳ ಬಳ್ಳಿ ಕತ್ತರಿಸಿದ ಮೇಲೆ ಸೋಂಕು ತಗುಲಿದರೆ ತೀವ್ರವಾದ ರಕ್ತಸ್ರಾವದಿಂದ ಮಕ್ಕಳು ಸಾಯುತ್ತವೆ. ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗೆ ದಾಖಲಾಗುವವರು ಬಹುಪಾಲು ಬಡವರು. ಇಂತಹ ಅಸಹಾಯಕರಿಂದಲೂ ಲಂಚ ನಿರೀಕ್ಷಿಸುವ ಚಿಕ್ಕಪ್ರಮಾಣದ ಭ್ರಷ್ಟಾಚಾರ ಸಾಕಷ್ಟು ಸಂಖ್ಯೆಯ ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತಿರುವುದು ದೊಡ್ಡ ದುರಂತ.

1990ರ ದಶಕದ ನಂತರ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗೆ ಬಳಸುವ ಉಪಕರಣಗಳ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಬಳಸಿದ, ತುಕ್ಕುಹಿಡಿದ ಉಪಕರಣಗಳನ್ನು ಮತ್ತೊಬ್ಬರ ಮೇಲೆ ಪ್ರಯೋಗ ಮಾಡುವುದರಿಂದಲೂ ಸೋಂಕು ತಗಲುತ್ತದೆ. ರೋಗನಿರೋಧಕ ಮದ್ದುಗಳ ಬಳಕೆ ಸಮರ್ಪಕವಾಗಿಲ್ಲ. ಶಿಕ್ಷಣ, ಆರೋಗ್ಯದಂತಹ ಮೂಲಭೂತ ಸೌಕರ್ಯಗಳಿಗೆ ಸರ್ಕಾರದ ಅನುದಾನ ವರ್ಷ ವರ್ಷಕ್ಕೂ ಕಡಿತವಾಗುತ್ತಿರುವುದು ಮತ್ತೊಂದು ವಿಪರ್ಯಾಸವಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವ ಸ್ಥಿತಿ ನೋಡಿದರೆ ಹಳ್ಳಿಗಳಲ್ಲಿರುವ ಸೂಲಗಿತ್ತಿಯರೇ ವಾಸಿ ಎಂಬ ಅಭಿಪ್ರಾಯ ಜನಜನಿತವಾಗಿದೆ. ಆದರೆ ಅನನುಭವಿ ಸೂಲಗಿತ್ತಿಯರಿಂದಲೂ ಹೆಚ್ಚಿನ ಅನಾಹುತಗಳಾಗಿವೆ.

ಒಂದು ಸಾವಿರ ಮಕ್ಕಳಲ್ಲಿ 13 ಮಕ್ಕಳು ಜನಿಸಿದ ಒಂದು ವಾರದೊಳಗೆ ಸಾಯುತ್ತವೆ. ಜನಿಸಿದ ದಿನವೇ ಸಾಯುವ ಮಕ್ಕಳ ಸಂಖ್ಯೆ ಸಾವಿರಕ್ಕೆ ಮೂರು. ಭಾರತದಲ್ಲಿ ಪ್ರತಿವರ್ಷ 2ಕೋಟಿ 70ಲಕ್ಷ ಮಕ್ಕಳು ಜನಿಸುತ್ತವೆ. ಸಮೀಕ್ಷೆ ನಡೆಸಿದ ಸಂಸ್ಥೆಯ ಹೇಳಿಕೆ ಪ್ರಕಾರ ಮೂರಕ್ಕೆ ಒಂದು ಮಗು ಸತ್ತುಹೋಗಿದ್ದರೆ, ವರ್ಷವೊಂದಕ್ಕೆ ಸಾಯುವ ಮಕ್ಕಳ ಸಂಖ್ಯೆ 3ಲಕ್ಷ 9 ಸಾವಿರಕ್ಕಿಂತ ಹೆಚ್ಚಿರಬೇಕಿತ್ತು. ಸಂಸ್ಥೆಯು ಯಾವ ಆಧಾರದ ಮೇಲೆ ಇದನ್ನು ಅರ್ಥೈಸಿದೆಯೋ ತಿಳಿಯುತ್ತಿಲ್ಲ ಎನ್ನುತ್ತಾರೆ ಹಿರಿಯ ಮಕ್ಕಳ ತಜ್ಞ ಡಾ.ಶಿವಾನಂದ. ಭಾರತಕ್ಕಿಂತ ಹಿಂದುಳಿದ ರಾಷ್ಟ್ರಗಳಲ್ಲಿ ಶಿಶುಮರಣ ಪ್ರಮಾಣ ಕಡಿಮೆ ಇದೆ. ಆರೋಗ್ಯ ಪದ್ಧತಿಗಳ ಸುಧಾರಣಾ ಯೋಜನೆ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಆಂದೋಲನದ ಅನ್ವಯ– ಗರ್ಭಿಣಿ ಬಾಣಂತಿ ಆರೈಕೆ, ಗ್ರಾಮದಲ್ಲಿ ಆರೋಗ್ಯ ಸಹಾಯಕರ ಸೇವೆ ಕಾರ್ಯಕ್ರಮಗಳು ಜಾರಿಯಲ್ಲಿದ್ದರೂ ಭಾರತದಲ್ಲೇ ಶಿಶುಮರಣ ಏಕೆ ಹೆಚ್ಚಾಗಿದೆ ಎಂಬುದರ ತಳಸ್ಪರ್ಶಿ ಅಧ್ಯಯನ ಆಗಬೇಕಿದೆ. ಶಿಶುಮರಣ ತಡೆಗಟ್ಟಲು ಮತ್ತಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಿದೆ. ಪಂಚಸೂತ್ರಗಳನ್ನು ಸರಿಯಾಗಿ ಪಾಲಿಸಿದರೆ ಗಣನೀಯ ಪ್ರಮಾಣದಲ್ಲಿ ಮಕ್ಕಳ ಸಾವನ್ನು ತಡೆಗಟ್ಟಬಹುದು ಎನ್ನುತ್ತಾರೆ ಹಿರಿಯ ಪ್ರಸೂತಿ ತಜ್ಞೆ ಡಾ.ಎಚ್.ಗಿರಿಜಮ್ಮ. ಅಂಕಿಅಂಶಗಳ ವ್ಯತ್ಯಾಸ ಏನೇ ಇರಲಿ, ಮಕ್ಕಳ ಸಾವಿನ ತಡೆಗೆ ಆದ್ಯತೆ ನೀಡಬೇಕಾದ ಅಂಶವನ್ನಂತೂ ಸಮೀಕ್ಷೆ ಮನಗಾಣಿಸಿದೆ.

■ ಗುಡಿಹಳ್ಳಿ ನಾಗರಾಜ



ಈಶ್ವರ್